Press Clipping

Publication : Esanje
Date : Sep 1, 2016
Edition : State
Page : 5

ನಿರುತ್ತರದಲ್ಲಿ ರಸೂಲ್ ಕೈ ಚಳಕ

ತಂತ್ರಜ್ಞಾನದ ವಿಷಯದಲ್ಲಿ ಭಾಷಾ ಚಲನಚಿತ್ರಗಳು ಹಾಲಿವುಡ್, ಬಾಲಿವುಡ್ ಚಿತ್ರಗಳಿಗೆ ಸರಿಸಮಾನವಾಗಿ ಬೆಳೆಯುತ್ತಿರುವುದು ಉತ್ತಮ ಬೆಳವಣಿಗೆ. ಆಸ್ಕರ್ ಪ್ರಶಸ್ತಿಯ ಬಳಿಕ ಧ್ವನಿ ಗ್ರಹಣ ತಂತ್ರಜ್ಞಾನಕ್ಕೆ ಹೆಚ್ಚು ಮಾನ್ಯತೆ ಸಿಗುತ್ತಿದೆ. ಕೈತುಂಬಾ ಕೆಲಸಗಳು ಬರುತ್ತಿರುವುದರಿಂದ ಚೂಸಿಯಾಗುವ ಸ್ವಾತಂತ್ರ್ಯ ಸಿಕ್ಕಿದೆ ಎಂದಿದ್ದಾರೆ ಸ್ಲಂ ಡಾಗ್ ಮಿಲೇನಿಯರ್ ಚಿತ್ರದ ಧ್ವನಿ ತಂತ್ರಜ್ಞಾನಕ್ಕೆ ಆಸ್ಕರ್ ಪ್ರಶಸ್ತಿ ಪಡೆದ ರೆಸೂಲ್ ಪೂಕುಟ್ಟಿ.

ಮೊದಲ ಬಾರಿಗೆ ಪೂಕುಟ್ಟಿ ಅವರು ಕನ್ನಡ ಚಿತ್ರವೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ನಿರುತ್ತರಕ್ಕಾಗಿ ಸ್ನೇಹಿತರೊಬ್ಬರ ಮೂಲಕ ಪೂಕುಟ್ಟಿ ಅವರನ್ನು ಸಂಪರ್ಕಿಸಿದೆ. ಪ್ರಯೋಗದೊಂದಿಗೆ ಚಿತ್ರ ಬೆಳೆಯುವುದರಿಂದ ವಿಷುವಲ್ ಜೊತೆಗೆ ಶಬ್ದ ಗ್ರಹಣವೂ ಮುಖ್ಯ ಪಾತ್ರ ವಹಿಸುತ್ತಿದೆ. ಬೆಂಗಳೂರಿನಿಂದ ಹಿಮಾಚಲದವರೆಗೆ ಚಿತ್ರದ ಶೂಟಿಂಗ್ ನಡೆದಿದೆ. ಆಯಾ ಸ್ಥಳದ ಸಂಸ್ಕೃತಿಯನ್ನು ದೃಶ್ಯ ಕಾವ್ಯದ ಮೂಲಕ ಕಟ್ಟಿಕೊಡುವುದು ಎಷ್ಟು ಮುಖ್ಯವೋ ಅಲ್ಲಿನ ಶಬ್ದಗಳೂ, ಧ್ವನಿಗಳೂ ಸಂಸ್ಕೃತಿಯ ಭಾಗವಾಗಿರುತ್ತವೆ. ಪೂಕುಟ್ಟಿ ಅವರು ಇದನ್ನು ಚೆನ್ನಾಗಿ ನಿರ್ವಹಿಸಿದ್ದಾರೆ ಎಂದು ನಿರ್ದೇಶಕ ಅಪೂರ್ವ ಕಾಸರವಳ್ಳಿ ಹೇಳಿದರು.

ಅಕ್ಟೋಬರ್ ತಿಂಗಳಲ್ಲಿ ಬಿಡುಗಡೆಯಾಗುತ್ತಿರುವ ನಿರುತ್ತರದ ಕಡೆಯ ಕೆಲವೊಂದು ಕೆಲಸಕ್ಕಾಗಿ ಬೆಂಗಳೂರಿಗೆ ಬಂದಿದ್ದ ಪೂಕುಟ್ಟಿ ಪತ್ರಕರ್ತರೊಂದಿಗೆ ಮುಖಾಮುಖಿಯಾದರು. ಚಿತ್ರದ ತಾರಾಗಣ, ಸೆಟ್, ಮೇಕಪ್, ದೃಶ್ಯ ಪರಿಣಾಮಗಳಿಗಾಗಿ ಸಾಕಷ್ಟು ಹಣ ವ್ಯಯಿಸಲಾಗುತ್ತದೆ. ಆದರೆ ಧ್ವನಿ ವಿನ್ಯಾಸಕಾರರಿಗೆ ಮಾತ್ರ ಮನ್ನಣೆ ಸಿಗುತ್ತಿಲ್ಲ. ನಿರ್ಮಾಪಕರು ಇದರ ಮಹತ್ವವನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಚಿತ್ರವೊಂದರ ಅಭಿವ್ಯಕ್ತಿಯಲ್ಲಿ ಶಬ್ದವೂ ಮುಖ್ಯ ಪಾತ್ರ ವಹಿಸುತ್ತದೆ ಎಂದು ತಮ್ಮ ಮನದ ಮಾತನ್ನು ಹೇಳುತ್ತ ಈ ಚಿತ್ರವು ಬಹಳ ಉತ್ತಮವಾಗಿ ಮೂಡಿಬಂದಿದೆ ಎಂದು ಪೂಕುಟ್ಟಿ ಹೇಳಿದರು. ನಿರುತ್ತರ ಚಿತ್ರ ಪೂರ್ಣಗೊಂಡಿದೆ. ಶೀಘ್ರದಲ್ಲೇ ಸೆನ್ಸಾರ್ ಮುಂದೆ ಹೋಗಲಿದೆ ಎಂದು ಅಪೂರ್ವ ಕಾಸರವಳ್ಳಿ ತಿಳಿಸಿದರು.